# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 13-8-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಬಳಕೆ ಹೆಚ್ಚಳ ಹಾಗೂ ದಾಸ್ತಾನು ಹಿಡಿದಿಡುವಿಕೆಯಿಂದ ಕಾಳುಮೆಣಸು ದರ ಹೆಚ್ಚಳ

ಭಾರತೀಯ ಮೂಲದ ಕಾಳುಮೆಣಸಿಗೆ ದೇಶೀ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳವಿದ್ದು, ಇದರೊಂದಿಗೆ ವ್ಯಾಪಾರಿಗಳು ಹಾಗೂ ಉತ್ಪಾದಕರು ದಾಸ್ತಾನು ಹಿಡಿದಿಟ್ಟು ಮಾರುಕಟ್ಟೆಗೆ ಲಭ್ಯತೆ ಇಳಿಕೆಯಿಂದ ದರ ಹೆಚ್ಚಳಗಾಗಿದೆ. ಭಾರತೀಯ ಕಾಳುಮೆಣಸಿಗೆ ದೇಶೀ ಮಾರುಕಟ್ಟೆಯಲ್ಲಿ ದರ ಕೆ.ಜಿ.ರೂ.500 ರ ಸುತ್ತವಿದ್ದು ವಿದೇಶೀ ಮೂಲದ ಕಾಳುಮೆಣಸಿಗೆ ದರ ಕಡಿಮೆಯಿರುವುದರಿಂದ ಆಕ್ರಮವಾಗಿ ಆಮದು ಹೆಚ್ಚಳವಾಗುತ್ತಿದ್ದು, ದೇಶಿ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದೆಯೆನ್ನಲಾಗಿದೆ. ವಿಯೆಟ್ನಾಂ, ಇಂಡೋನೇಶಿಯಾ, ಬ್ರೆಜಿಲ್ ಹಾಗೂ ಶ್ರೀಲಂಕಾಗಳಿಂದ ಕಾಳುಮೆಣಸು ತೆರಿಗೆ ತಪ್ಪಿಸಿ ಅಕ್ರಮವಾಗಿ ಆಮದಾಗುತ್ತಿದೆಯೆನ್ನಲಾಗಿದೆ. ಅಕ್ರಮವಾಗಿ ಕಬ್ಬಿಣ ಸ್ಕ್ರಾಪ್,ವೇಸ್ಟ್ ಮುಂತಾಗಿ ನಮೂದಿಸಿ ಆಮದಾಗುತ್ತಿದೆಯೆನ್ನಲಾಗಿದೆ. ಇವುಗಳಿಗೆ ವಿಯೆಟ್ನಾಂ 50 ಶೇಕಡಾ ಮತ್ತು ಬ್ರೆಜಿಲ್ 70 ಶೇಕಡಾ ಜಿ ಎಸ್ ಟಿ ಮತ್ತು ಆಮದು ತೆರಿಗೆಯಿದೆಯೆನ್ನಲಾಗಿದೆ. ತೆರಿಗೆ ಸೇರಿ ಶ್ರೀಲಂಕಾ ಮೂಲಕ ಆಮದು ಕಾಳುಮೆಣಸಿಗೆ ಕೆ.ಜಿ ರೂ.513 ದರ ಬೀಳುತ್ತಿದೆ. ಶ್ರೀಲಂಕಾ ಮೂಲದ ಕಾಳುಮೆಣಸಿನ ಅಂತಾರಾಷ್ಟ್ರೀಯ ದರ ಟನ್‌ಗೆ $ 5300 ಹಾಗೂ ಭಾರತೀಯ ಮೂಲದ್ದಕ್ಕೆ $ 6700 ಇದೆಯೆನ್ನಲಾಗಿದೆ. ವಿಯೆಟ್ನಾಂ ಮತ್ತು ಬ್ರೆಜಿಲ್ ಮೂಲದ ಕಾಳುಮೆಣಸು ಮ್ಯಾನ್ಮಾರ್ ಮೂಲಕ ಭಾರತ ಪ್ರವೇಶಿಸಿ ಉತ್ತರ ಭಾರತದಲ್ಲಿ ವ್ಯಾಪಕವಾಗಿ ಮಾರಾಟವಾಗುತ್ತಿದೆಯೆನ್ನಲಾಗಿದೆ. ತೆರಿಗೆ ತಪ್ಪಿಸಿದಾಗ ವಿದೇಶೀ ಮೂಲದ ಕಾಳುಮೆಣಸಿಗೆ ಕೆ.ಜಿ.ಗೆ ರೂ.300-400 ಆಗಬಹುದೆನ್ನಲಾಗಿದೆ. ಭಾರತದಿಂದ ಈಗ ರಫ್ತಾಗುತ್ತಿರುವುದು ವಿದೇಶೀ ಮೂಲದಿಂದ ಆಮದು ಮಾಡಿ ಮೌಲ್ಯವರ್ಧಿಯಾದ ಕಾಳುಮೆಣಸೆನ್ನಲಾಗುತ್ತಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇತರ ದೇಶಗಳ ಕಾಳುಮೆಣಸಿಗಿಂತ ಭಾರತದ ಕಾಳುಮೆಣಸಿನ ದರ ಅತಿ ಹೆಚ್ಚಳವಿರುವುದರಿಂದ ರಫ್ತು ಇಳಿಕೆಯಾಗಿದೆಯೆನ್ನಲಾಗಿದೆ. ವಿದೇಶಗಳಿಂದ ತೆರಿಗೆ ತಪ್ಪಿಸಿ ಬರುವ ಕಾಳುಮೆಣಸಿಗೆ ತಡೆಯಾದರೆ ಭಾರತದ ದೇಶಿ ಕಾಳುಮೆಣಸಿಗೆ ದೇಶೀ ಮಾರುಕಟ್ಟೆಯಲ್ಲಿ ದರ ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆ.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಗಳಿಕೆ

ಪ್ರತಿಸ್ಪರ್ಧಿ ಅಂತರಾಷ್ಟ್ರೀಯ ಖಾದ್ಯತೈಲ ದರ ಹೆಚ್ಚಳದಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಇಂದೂ ಹೆಚ್ಚಳವಾಗಿ ವಾರಾದ ಗಳಿಕೆಯುಕ್ತ ಸಾಗುತ್ತಿದೆ. ಇಂದು 0.47 ಶೇಕಡಾ ಹೆಚ್ಚಳ ಕಂಡಿದೆ. ಚಿಕಾಗೋ ಸೋಯ ಎಣ್ಣೆ ದರ 1.17 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಜುಲೈನಲ್ಲಿ ಭಾರತದ ಪಾಮೆಣ್ಣೆ ಆಮದು 125 ಶೇಕಡಾ ಇಳಿಕೆಯಾಗಿ ಜೂನ್ ತಿಂಗಳ 590921 ಟನ್‌ಗಳಿಂದ 530420 ಟನ್‌ಗಳಿಗೆ ಇಳಿಕೆಯಾಗಿದೆಯೆಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಎಸೋಸಿಯೇಶನ್ ವರದಿ ಮಾಡಿದೆ. ಸೋಯಾ ಎಣ್ಣೆ ಆಮದು 125 ಶೇಕಡಾ ವೃದ್ದಿಯೊಂದಿಗೆ 519566 ಟನ್‌ಗಳಿಗೇರಿದೆ. ಸೂರ್ಯಕಾಂತಿ ಎಣ್ಣೆ 30 ಶೇಕಡಾ ವೃಧ್ಧಿಯೊಂದಿಗೆ 155300 ಟನ್‌ಗಳಿಗೇರಿದೆ.

## ಭಾರತೀಯ ಅಕ್ಕಿ ರಫ್ತು ದರ ಇಳಿಕೆ

ರಫ್ತು ಬೇಡಿಕೆ ಇಳಿಕೆಯಿಂದ ಭಾರತದ ಅಕ್ಕಿಯ ರಫ್ತು ದರ ದುರ್ಬಲವಾಗಿದೆ. ಆಫ್ರಿಕಾ ದೇಶದ ಖರೀದಿದಾರರು ಸಕ್ರಿಯರಾಗದುದರಿಂದ ಭಾರದ ಅಕ್ಕಿ ರಫ್ತು ದರ ಇಳಿಕೆಯಾಗಿದೆ. ಜಾಗತಿಕ ಬೇಡಿಕೆ ಪ್ರಬಲವಾಗಿರುವುದರಿಂದ ದರ ಮತ್ತೆ ಇಳಿಕೆಯಾಗದೆನ್ನಲಾಗಿದೆ. ಆಂತರಿಕ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳವಿದ್ದು ದರ ಹೆಚ್ಚಳವಾಗಿದೆ. ಉತ್ಪಾದನೆ ಇಳಿಕೆಯ ಅಂದಾಜಿನಿಂದ ದೇಶೀ ಮಾರುಕಟ್ಟೆಯಲ್ಲಿ ದರ ಹೆಚ್ಚಳವಾಗುತ್ತಿದೆ.

## ಮಸೂರ್ ದಾಲ್ ಆಮದು ಹೆಚ್ಚಳ ಸಾಧ್ಯತೆ

ಈ ವರ್ಷ ಮಸೂರ್ ಅಂತರಾಷ್ಟ್ರೀಯ ದರ ಇಳಿಕೆಯಾಗಿರುವುದರಿಂದ ಹಾಗೂ ಕೆನಡಾ,ಆಸ್ಟ್ರೇಲಿಯಾಗಳಲ್ಲಿ ಉತ್ಪಾದನೆ ಹೆಚ್ಚಳವಿದ್ದು, ಕಟಾವು ಆರಂಭವಾಗಲಿರುವುದರಿಂದ ಭಾರತಕ್ಕೆ ಆಮದು ಹೆಚ್ಚಿನ ಮಟ್ಟದಲ್ಲಿ ಆಗುವ ಸಾಧ್ಯತೆಯಿದೆಯೆನ್ನಲಾಗಿದೆ. ಅಂತರಾಷ್ಟ್ರೀಯ ದರ ಇಳಿಕೆ ಹಾಗೂ ಪೂರೈಕೆ ಹೆಚ್ಚಳದಿಂದ ಭಾರತಕ್ಕೆ ಮಸೂರ್ ಆಮದು ಹೆಚ್ಚಳವಾಗುತ್ತಿದ್ದು ದರ ಇಳಿಕೆಯಾಗುತ್ತಿದೆ.

## ಜುಲೈ ತಿಂಗಳಲ್ಲಿ ಭಾರತದ ಖಾದ್ಯತೈಲ ಆಮದು 31 ಶೇಕಡಾ ಹೆಚ್ಚಳ

ಜುಲೈ ತಿಂಗಳಲ್ಲಿ ಭಾರತದ ಖಾದ್ಯತೈಲ ಆಮದು 31 ಶೇಕಡಾ ಹೆಚ್ಚಳವಾಗಿ 12.05 ಲಕ್ಷ ಟನ್‌ಗಳಿಗೇರಿದೆ. ಹಿಂದಿನ ವರ್ಷದ ಜುಲೈ ತಿಂಗಳಲ್ಲಿ 9.17 ಲಕ್ಷ ಟನ್ ಖಾದ್ಯ ತೈಲ ಆಮದಾಗಿತ್ತೆನ್ನಲಾಗಿದೆ. ಖಾದ್ಯ, ಖಾದ್ಯೇತರ ಸಸ್ಯಜನ್ಯ ಎಣ್ಣೆಗಳ ಆಮದು(ಭಾರತಕ್ಕೆ) ಈ ವರ್ಷ 24 ಶೇಕಡಾ ಹೆಚ್ಚಳವಾಗಿ 1,214,353 ಟನ್‌ಗಳಿಗೇರಿದೆ. ಜುಲೈ 2021 ರಲ್ಲಿ ಇದು 980,624 ಟನ್‌ಗಳಾಗಿತ್ತೆಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಎಸೋಸಿಯೇಶನ್ ವರದಿ ಮಾಡಿದೆ. ಒಟ್ಟು ಆಮದಿನಲ್ಲಿ ರಿಫೈಂಡ್ ಪಾಮೆಣ್ಣೆ 1144496 ಟನ್‌ಗಳು ಹಾಗೂ ಕಚ್ಚಾ ಪಾಮೆಣ್ಣೆ 3659699 ಟನ್‌ಗಳು, ಕಚ್ಚಾ ಸೋಯಾ ಎಣ್ಣೆ 33,30,556ಟನ್‌ಗಳು ಹಾಗೂ ಸೂರ್ಯಕಾಂತಿ ಎಣ್ಣೆ 15,03,627 ಟನ್‌ಗಳಾಗಿವೆ. 2021-22ರ ಪ್ರಥಮ 9 ತಿಂಗಳುಗಳಲ್ಲಿ ರಿಫೈಂಡ್ ಪಾಮೆಣ್ಣೆ ಆಮದು 43311 ಟನ್‌ಗಳಿಂದ 11,44,496 ಟನ್‌ಗಳಿಗೆ ನೆಗೆಯಿತು. ಆಗಸ್ಟ್ 1 ಕ್ಕೆ ಭಾರತದ ಖಾದ್ಯತೈಲ ದಾಸ್ತಾನು 48000 ಟನ್‌ಗಳಷ್ಟು ಹೆಚ್ಚಳವಾಗಿ ಜುಲೈ 1 ರಲ್ಲಿದ್ದ 22.56 ಲಕ್ಷ ಟನ್‌ಗಳಿಂದ 23.04 ಟನ್‌ಗಳಿಗೇರಿದೆ.